**SC No. 145/2022**
**P.W. 1**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 145/2022** **P.W. 1**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **09.06.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಆದೇಶ ದಿನಾಂಕ **27.05.2026** ರಂತೆ ಪಾಟೀ ಸವಾಲುಃ ಎಲ್ಲಾ ಆರೋಪಿತರ ಪರ ಶ್ರೀ. **SJY** ವಕೀಲರಿಂದ :

1. ಕೃತ್ಯ ನಡೆದ ಸ್ಥಳ MRPL Petrol Bunk, Avalahalli ಎಂದರೆ ಸರಿ. ನಮ್ಮ ಪ್ರಕಾರ ಕೃತ್ಯ ನಡೆದ ಅವಧಿ 1 ನಿಮಿಷ ಎಂದು ನಮೂದು ಆಗಿದೆ ಎಂದರೆ ಸರಿ. ಘಟನೆ ಮಧ್ಯರಾತ್ರಿ ನಡೆದಿದ್ದು ನಾನು ಮರು ದಿನ ಘಟನಾ ಸ್ಥಳಕ್ಕೆ ಹೋಗಿದ್ದೆ. ನಾನು ಘಟನಾ ಸ್ಥಳಕ್ಕೆ ಹೋಗಿದ್ದೆ ಎಂದು ರಿಮ್ಯಾಂಡ್ ಅರ್ಜಿಯಲ್ಲಿ ಬರೆದಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ವಿಚಾರಣೆ ಮಾಡಿದ್ದೇನೆ. ಯಾರನ್ನು ವಿಚಾರಣೆ ಮಾಡಿದ್ದೇನೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. MRPL ಪೆಟ್ರೋಲ್ ಬಂಕ್ ನಲ್ಲಿ CCTV ಇರುವ ವಿಚಾರ ಗೊತ್ತು. ಕೃತ್ಯ ನಡೆದ ಸ್ಥಳ ಕಾಣುವಂತೆ ಆ CCTV ಇರಲಿಲ್ಲ. MRPL ಪೆಟ್ರೋಲ್ ಬಂಕ್ ನಲ್ಲಿ ಇದ್ದ ಸಿಬ್ಬಂದಿಯನ್ನು ವಿಚಾರಣೆ ಮಾಡಿದ್ದು ಅವರು ನೋಡಿಲ್ಲ ಎಂದು ಹೇಳಿದರು. ಆ ರೀತಿ ಘಟನೆ ನಡೆಯದೇ ಇರುವುದರಿಂದ ಅವರು ನೋಡಿಲ್ಲ ಎಂದು ಹೇಳಿದ್ದಾರೆ ಎಂದರೆ ಸರಿ ಅಲ್ಲ.

2. ಮುದ್ದೆಮಾಲುಗಳನ್ನು ಆರೋಪಿತರು ಎಲ್ಲಿಂದ ತಂದು ಹಾಗೂ ಯಾರಿಂದ ಖರೀದಿ ಮಾಡಿದ್ದರು ಎಂಬ ಬಗ್ಗೆ ವಿಚಾರಣೆ ಮಾಡಿಲ್ಲ. ಮುದ್ದೆಮಾಲುಗಳನ್ನು ಆದಾಗಲೇ ಪ್ಯಾಕ್ ಮಾಡಿದ್ದರಿಂದ ನಾನು ಬೆರಳಚ್ಚು ಪಡೆದುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಚಾಸಾ. 1 ರವರು ಆ ಮುದ್ದೆಮಾಲುಗಳನ್ನು ವಶಕ್ಕೆ ಪಡೆದಿದ್ದರು. ಆರೋಪಿತರು ಸ್ಥಳದಲ್ಲಿ ಇದ್ದ ಬಗ್ಗೆ ನನ್ನ ಬಗ್ಗೆ ಯಾವುದೇ ಪ್ರತ್ಯಕ್ಷ ಸಾಕ್ಷಿ ಇರುವುದಿಲ್ಲ ಎಂದರೆ ಸರಿ. ಸಂಜೆ 6.00 ರಿಂದ 8.00 ಆರೋಪಿತರು ಯಾರನ್ನು ಹೆದರಿಸಿದ್ದರು ಮತ್ತು ಬೆದರಿಕೆ ಹಾಕಿದ ಬಗ್ಗೆ ಅಲ್ಲಿ ಸ್ಥಳೀಯ ಸಾಕ್ಷಿಗಳು ಸಿಗಲಿಲ್ಲ. ಅಲ್ಲಿ ಒಂದು ಥಿಯೇಟರ್ ಇದೆ ಎಂದರೆ ಸರಿ. ಅಲ್ಲಿ ಯಾವುದೇ ಸಿಬ್ಬಂದಿ ಸಿಗಲಿಲ್ಲ. ಚಾಸಾ. 1 ರಿಂದ 5 ರವರ ಚಲನವಲನ ವಹಿ ವಶಕ್ಕೆ ಪಡೆಯುವ ಪ್ರಯತ್ನ ಮಾಡಲಿಲ್ಲ

ಹಾಗೂ ಅವರ Tower Dumping CDR ಗಳನ್ನು ವಶಕ್ಕೆ ಪಡೆಯುವ ಪ್ರಯತ್ನ ಮಾಡಲಿಲ್ಲ. ಅದೇ ರೀತಿ ಆರೋಪಿತರ Tower Dumping CDR ಗಳನ್ನು ವಶಕ್ಕೆ ಪಡೆಯುವ ಪ್ರಯತ್ನ ಮಾಡಲಿಲ್ಲ.

3. ದಾಳಿ ಮಹಜರ್ ಅನ್ನು ಎಲ್ಲಿ ತಯಾರು ಮಾಡಿದ್ದಾರೆ ಎಂದು ವಿಚಾರ ಮಾಡಿಲ್ಲ ಎಂದರೆ ಸರಿ ಅಲ್ಲ. ಮುದ್ದೆಮಾಲುಗಳನ್ನು ಆರೋಪಿತರ ಸ್ವ-ಇಚ್ಛಾ ಮೇರೆಗೆ ಕಂಡು ಹಿಡಿಯಲಿಲ್ಲ ಎಂದರೆ ಸರಿ. ಆರೋಪಿತರ ಸ್ವ-ಇಚ್ಛಾ ಹೇಳಿಕೆ ಆಧಾರದ ಮೇಲೆ ಪುನಃ ನಾನು ಆರೋಪಿತರನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಮಹಜರ್ ಮಾಡಿಲ್ಲ ಎಂದರೆ ಸರಿ. 5 ನೇ ಆರೋಪಿಯನ್ನು ವಶಕ್ಕೆ ಪಡೆಯಲು ಪ್ರಯತ್ನ ಹೇಗೆ ಮಾಡಿದ್ದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿದಾರರ ಹೇಳಿಕೆಗಳನ್ನು ಅವರು ಹೇಳದೇ ಇದ್ದರು ಕೇಸಿಗೆ ಅಳವಡಿಸಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ಪ್ರಕರಣದ ದಾಖಲು ಮಾಡಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.